(viii) ಶಿವಮೊಗ್ಗ ಜಿಲ್ಲೆ ಹಾರ್ನಹಳ್ಳಿಯಲ್ಲಿ ಕುಡಿಯುವ ನೀರಿನ ಪೂರೈಕೆ ಬಗ್ಗೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಸ್ವಾಮಿ, ಶಿವಮೊಗ್ಗಾ ತಾಲ್ಲೂಕಿನಲ್ಲಿ ಹಾರ್ನಹಳ್ಳಿ ಎಂಬುದು ಬಹಳ ದೊಡ್ಡ ಊರು. ಅಲ್ಲಿ ಗ್ರಾಮಾಂತರ ನೀರು ಸರಬರಾಜು ಯೋಜನೆ ಇದೆ. ಆದರೆ ಅಲ್ಲಿ ಕಳೆದ 3 4 ವರ್ಷದಿಂದ ನೀರು ಬರುತ್ತಿಲ್ಲ. ಅಲ್ಲಿ ನೆಲಮಟ್ಟದಲ್ಲಿ ಒಂದು ನೀರಿನ ಟ್ಯಾಂಕನ್ನು ಕಟ್ಟಿ ನೀರನ್ನು ಅದರಲ್ಲಿ ಬಿಟ್ಟಿದ್ದರು. ಆದರೊಳಕ್ಕೆ ಒಬ್ಬ ಹೆಣ್ಣುಮಗಳು ಬಿದ್ದು ಸತ್ತುಹೋಗಿದ್ದಾಳೆ. ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ನಾನು ತಂದಿದ್ದರೂ ಕೂಡ ಅವರು ಯಾವುದೇ ಕ್ರಮವನ್ನು ಇಂದುವರೆಗೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರ್ಕಾರದ ಗಮನವನ್ನು ನಾನು ಸೆಳೆದಿದ್ದೇನೆ. ಈಗಲಾದರೂ ಸರ್ಕಾರದವರು ಇದರ ಕಡೆ ಗಮನ ಹರಿಸಿ ಸೂಕ್ತ ಕ್ರಮ ತೆಗೆದುಕೊಂಡು ಅಲ್ಲಿನ ಜನರಿಗೆ ಕುಡಿಯುವ ನೀರನ್ನೊದಗಿಸಲು ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.— (ಮಾನ್ಯ ಕಾನೂನು ಹಾಗೂ ಸಂಸದೀಯ ಸಚಿವರು) — ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸಂಬಂಧಪಟ್ಟವರಿಂದ ವರದಿಯನ್ನು ತರಿಸಿಕೊಂಡು ನಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

(xi) ಬೆಂಗಳೂರು ನಗರದ ಸುತ್ತಲೂ ಕೆಂಪೇಗೌಡ ಕಟ್ಟಿಸಿದ ಗೋಪುರಗಳನ್ನು ಸಂರಕ್ಷಿಸುವ ಬಗ್ಗೆ.

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).— ಮಾನ್ಯ ಅಧ್ಯಕ್ಷರೆ, ನಮ್ಮ ಬೆಂಗಳೂರು ನಗರದ ಸುತ್ತಲೂ ಕೆಂಪೇಗೌಡ ಕಟ್ಟಿಸಿದ ಗೋಪುರಗಳಿವೆ. ಇವುಗಳು ಐತಿಹಾಸಿಕ ಮತ್ತು ವಾಸ್ತುಶಿಲ್ಪಗಳಾಗಿವೆ. ಇವುಗಳ ಪೈಕಿ ಒಂದು ಸದಾಶಿವನಗರದ ಮುಂದೆ ಬಳ್ಳಾರಿ ರಸ್ತೆಯಲ್ಲಿ ಇದೆ. ಅಲ್ಲಿ ಒಂದು ದೊಡ್ಡ ನಿವೇಶನ ಇದ್ದು ಆದರಲ್ಲಿ ಒಂದು ಕಟ್ಟಡ ಬರುತ್ತಿದೆ. ಇದು ಕೆಂಪೇಗೌಡ ಗೋಪುರಕ್ಕೆ ಅಡ್ಡ ಬರುತ್ತಿರುವುದರಿಂದ ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಈ ನಿವೇಶನ ಯಾರಿಗೆ ಸೇರಿದ್ದೆಂದು ಕಾರ್ಪೊರೇಷನ್‌ನವರನ್ನು ಕೇಳಿದರೆ ಬಿ ಡಿ ಎ. ನವರಿಗೆ ಬರುತ್ತದೆಂದು ಹೇಳುತ್ತಾರೆ, ಬಿ ಡಿ ಎ. ನವರನ್ನು ಕೇಳಿದರೆ ಕಾರ್ಪೊರೇಷನ್‌ಗೆ ಸೇರುತ್ತದೆಂದು ಹೇಳುತ್ತಾರೆ. ಇದು ಯಾರಿಗೂ ಸರಿಯಾಗಿ ಗೊತ್ತಿಲ್ಲ. ಈಗ ಆ ನಿವೇಶನದಲ್ಲಿ ಒಂದು ದೊಡ್ಡ ಕಟ್ಟಡ ಬರುತ್ತಿದೆ. ಆದರೆ ಕೆಂಪೇಗೌಡ ಗೋಪುರ ಇರುವ ಪ್ರದೇಶದಲ್ಲಿ ಯಾವುದೇ ವಿಧವಾದ ಕಟ್ಟಡವನ್ನು ಕಟ್ಟಬಾರದೆಂದು ಹಿಂದೆ ತೀರ್ಮಾನವಾಗಿದೆ. ಹಿಂದೆ ವಿಧಾನಸೌಧದ ಮುಂದೆ ಒಂದು ಕಟ್ಟಡವನ್ನು ಕಟ್ಟಬೇಕೆಂದು ಹೇಳಿದಾಗ ಆಗಿನ ಮುಖ್ಯಮಂತ್ರಿಗಳಾದ ಹನುಮಂತಯ್ಯನವರು ಅವಕ್ಕೆ ಅವಕಾಶವನ್ನು ಕೊಡಲಿಲ್ಲ. ಅದೇ ರೀತಿ ಇಲ್ಲೂ ಕೂಡ ಜಲಮಂಡಲಿಯವರು ಆ ಪ್ರದೇಶದಲ್ಲಿ ಕಟ್ಟಡವನ್ನು ಕಟ್ಟಿಕೊಳ್ಳುತ್ತೇವೆಂದು ಕೇಳಿದಾಗ ಅದಕ್ಕೂ ಅವಕಾಶ ಕೊಡಲಿಲ್ಲ. ಆದರೆ ಈಗ ಅದೇ ಪ್ರದೇಶದಲ್ಲಿ ರಮಣ ಮಹರ್ಷಿ ಸಂಸ್ಥೆಗೆ ಸೇರಿದ ಕಟ್ಟಡವನ್ನು 4 ಅಂತಸ್ತಿಗೆ ಕಟ್ಟಬೇಕೆಂದು ಮಾತುಕತೆ ನಡೆಸುತ್ತಿದ್ದಾರೆ. ಆದ್ದರಿಂದ ಕೂಡಲೇ ನಗರಸಭೆಯವರು ಆಗಲಿ ಅಥವಾ ಅಭಿವೃದ್ಧಿ ಪ್ರಾಧಿಕಾರದವರಾಗಲಿ ಇದನ್ನು ನಿಲ್ಲಿಸಬೇಕು. ಕೆಂಪೇಗೌಡನ ಸ್ಮರಣಾರ್ಥ ಇರತಕ್ಕ ಈ ಗೋಪುರಗಳನ್ನು ತಾವು ರಕ್ಷಣೆ ಮಾಡಬೇಕು. ರಮಣ ಮಹರ್ಷಿ ಸಂಸ್ಥೆಯ ಅಧಿಕಾರವರ್ಗದವರಿಗೆ ಬಹಳ ಪ್ರಭಾವೀ ಅಧಿಕಾರಿಗಳು ಅವಕಾಶವನ್ನು ಕೊಟ್ಟಿದ್ದಾರೆಂದು ಕೇಳಿದ್ದೇವೆ ಅದು ಯಾರೇ ಆಗಲಿ, ನಮ್ಮ ಬೆಂಗಳೂರು ಕೆಂಪೇಗೌಡ ಕಟ್ಟಿಸಿರತಕ್ಕ ಗೋಪುರಗಳ ವಿಷಯದಲ್ಲಿ ಯಾವುದೇ ಕಟ್ಟಡಗಳು ಬರದಂತೆ ನೋಡಿಕೊಳ್ಳುವುದರ ಜೊತೆಗೆ ಈ ಗೋಪುರಗಳನ್ನು ರಕ್ಷಿಸುವ ಕೆಲಸವನ್ನು ಬಹಳ ಗಂಭೀರವಾಗಿ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ಕೆ ರಾಮಯ್ಯ (ಕುಣಿಗಲ್).— ಮಾನ್ಯ ಅಧ್ಯಕ್ಷರೆ, ಕೆಂಪೇಗೌಡನು ಬೆಂಗಳೂರಿನ 4 ದಿಕ್ಕುಗಳಲ್ಲೂ ಗೋಪುರಗಳನ್ನು ನಿರ್ಮಿಸಿದ್ದಾನೆ. ಇದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಈ ವಿಷಯವನ್ನು ನಾವು ಯಾವ ದೃಷ್ಟಿಯಿಂದ ನೋಡಿದರೂ ಬಹಳ ಸಂತೋಷವಾದುದು. ಆದರೆ ಈಗ ಬಳ್ಳಾರಿ ರಸ್ತೆಯಲ್ಲಿರುವ ಗೋಪುರದ ಎದುರುಗಡೆ ಒಂದು ದೊಡ್ಡ ಕಟ್ಟಡ ಬರುತ್ತಿದೆ. ಆದರೆ ಈ ಸ್ಥಳದಲ್ಲಿ ಒಂದು ಒಳ್ಳೆಯ ಉದ್ಯಾನವನವನ್ನು ನಿರ್ಮಾಣ ಮಾಡಬೇಕೆಂದು ಬಹಳ ಹಿಂದೆಯೇ ಟೌನ್ ಪ್ಲಾನಿಂಗ್‌ನವರು ತೀರ್ಮಾನ ತೆಗೆದುಕೊಂಡಿದ್ದರು. ಇದೇ ವಿಚಾರದಲ್ಲಿ ಹಿಂದೆ ಚರ್ಚೆ ಕೂಡ ಆಗಿದೆ. ಯಾವುದೇ ಸ್ಥಳವನ್ನಾಗಲೀ ಯಾವ ಉದ್ದೇಶಕ್ಕೋಸ್ಕರ ಮೀಸಲು ಇಡಲಾಗುತ್ತದೆ ಅದೇ ಉದ್ದೇಶಕ್ಕಾಗಿ ಆ ಸ್ಥಳವನ್ನು ಉಪಯೋಗಿಸಿಕೊಳ್ಳಬೇಕೇ ಹೊರತು ಬೇರೆ ಉದ್ದೇಶಕ್ಕೂ ಅದನ್ನು ಉಪಯೋಗಿಸಿಕೊಳ್ಳಕೂಡದೆಂದು ಸರ್ಕಾರದ ತೀರ್ಮಾನವಾಗಿದೆ. ಉದಾಹರಣೆಗೆ ಹೇಳುವುದಾದರೆ ಶಾಲಾಕಾಲೇಜುಗಳಿಗಾಗಿ ಇಟ್ಟ ನಿವೇಶನದಲ್ಲಿ ಶಾಲಾಕಾಲೇಜುಗಳನ್ನು ಕಟ್ಟಬೇಕೇ ಹೊರತು ಅಲ್ಲಿ ಮಸೀದಿಯನ್ನಾಗಲಿ, ದೇವಸ್ಥಾನವನ್ನಾಗಲೀ ಕಟ್ಟುವಂತಿಲ್ಲ. ಅದೇ ರೀತಿ ಈ ಪ್ರದೇಶದಲ್ಲಿ ಉದ್ಯಾನವನಕ್ಕಾಗಿ ಮೀಸಲು ಇಟ್ಟಿರುವುದರಿಂದ ಅಲ್ಲಿ ಉದ್ಯಾನವನವನ್ನೇ ನಿರ್ಮಾಣ ಮಾಡಬೇಕು. ಆದರೆ ಈಗ ಅಲ್ಲಿ ಒಂದು ದೊಡ್ಡ ಕಟ್ಟಡ ಕಟ್ಟುತ್ತಿರುವುದರಿಂದ ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ನಾನು ಕೇಳಬಯಸುತ್ತೇನೆ.